

ಧಾರವಾಡ ಕೋಟೆ

ಮರದ ಕೆಳಗ ಬಂದರು. ಅವರು ಬಂದಾಗ ಬಿಸಿಲು ಒಮ್ಮಿಗೇಲೆ ಬೆಳದಿಂಗಳಾತು... ಅವರಲ್ಲೊಬ್ಬ ಸುರ ಸುಂದರಾಂಗ ಹೆಣ್ಣ ನೋಡಲಿಕ್ಕೆ ತನ್ನ ಊರಿಗೆ ಹೊಂಟಿದ್ದ. ಅವನವ್ವ ಹೆಣ್ಣ ಪಾಸ್ ಮಾಡಿ ಇವನನ್ನ ಲಗೂನ ಹೆಣ್ಣ ನೋಡಲಿಕ್ಕೆ ಬಾ ಅಂತ ತಾರ ಮಾಡಿದ್ದಳಂತ. ಅವರೆಲ್ಲರೂ ಒಬ್ಬರಿಗೊಬ್ಬರು ಜೋಡೀ ಮಾತಾಡೋವಾಗ ಚೆಲುವಿಗೆ ಇವೆಲ್ಲಾ ಸುದ್ದಿ ತಿಳಿದವು. ಹಿಂಗ ಸ್ವಲ್ಪ ಹೊತ್ತಿನ ಮ್ಯಾಲೆ ಅಷ್ಟೂರೂ ತಂತಮ್ಮ ಹಾದೀ ಹಿಡಿದರು. ನಮ್ಮ ಚೆಲುವನೂ ತನ್ನ ಗಾದಿ ಸುತ್ತಿ ತನ್ನ ಬೆನ್ನಿಗೆ ಕಟ್ಟಿಗೊಳ್ಳಲಿಕ್ಕೆ ಹತ್ತಿದ್ದ. ಅಂವಾ ಪದೇ ಪದೇ ಕಡೆಗಣ್ಣೀಲೇ ನಮ್ಮ ಚೆಲುವೀನ್ನ ನೋಡಿ ತನ್ನ ಹೆಂಡತಿ ಆಗುವಾಕಿನೂ ಹಿಂಗ ಕಾಣ್ತಿರಬಹುದಂತ ಕನಸ ಕಾಣಲಿಕ್ಕೆ ಹತ್ತಿದ್ದ. ಆಕೀನ್ನ ಆ ಚೆಲುವ ಹಿಂಗ ನೋಡೋದು ಚೆಲುವಿಗೆ ಭಾಳ ಹಿತವಾಗಿತ್ತು. ಅವಾ ಹೋಗೋ ತನಕಾ ತಾನೂ ಆ ಜಾಗಾ ಬಿಟ್ಟು ಹೋಗ ಬಾರದಂತ ಆಕೀನೂ ಪಟ್ಟಾಗಿ ಕುತಗೊಂಡಳು.

ಹಿಂಗ ಇವರಿಬ್ಬರೂ ನಜರ ಕೆ ಸಾಮನೆ ಮಾಡಕೋತ ಕೂತಾಗ ನಡು ವಯಸ್ಸಿನ ಹೆಣಮಗಳೊಬ್ಬಾಕಿ ಕೊಡಪಾನದ ತುಂಬಾ ಸೀ ನೀರ ತುಂಬಿಕೊಂಡು ತನ್ನ ಮನೀ ಕಡೆ ಹೊಂಟಿದ್ದಳು. ನಮ್ಮ ಚೆಲುವನಿಗೂ ತನ್ನ ನೀರಿನ ಬಾಟಲ್ಲು ತುಂಬಿಸಿಗೋಬೇಕಾಗಿತ್ತು. ಆ ಹೆಣ್ಣಮಗಳು ಜ್ವಾಕಿಲೆ ಅವನ ಬಾಟಲೀಗೆ ನೀರು ಸುರಕೋತ, 'ನೀ ಯಾವೂರಪಾ? ಇಲ್ಲಿಯವನ ಹಾಂಗ ಕಾಣುದುಲ್ಲಲಾ? ಯಾರ ಮಗ ನೀ?' ಅಂತ ಕೇಳಿದಳು. 'ನಂದೂ... ಊರಬೇ ಯವ್ವ... ಊರಿಗೆ ಹೊಂಟೇನಿ ಹೆಣ್ಣು ನೋಡಾಕ!' ಅಂತ ಕಡೀ ಮಾತು ಹೇಳಿ ಮತ್ತ ಸುಂದರಿಯ ಮಾರಿ ನೋಡಿದ. ಹೀಗೇ ನಿನ್ನ ಹಾಂಗs ಇದ್ದಾಳ ನನ್ನ ಹೆಂಡತಿಯಾಗುವ ಹುಡುಗಿ ಅನ್ನುವ ಭಾವದಾಗ... ! ಆ ಕ್ಷಣದಾಗ ಚೆಲುವಿಗೆ ತಾನs ಅವನ ಹೆಂಡತಿಯಾಗಬಾರದೇಕೆ ಎನ್ನುವ ಅಪೂರ್ವ ಆಸೆಯೊಂದು ಮನದಾಗ ಥಾಳಾಗಿ ಮೂಡಿತು.

ಬಾಟಲಿಯೊಳಗ ನೀರ ಸುರುವುತ್ತಿದ್ದ ಹೆಣಮಗಳು 'ಅಯ್ಯಯ್ಯ ಆ ಊರಿಗ್ಯಾರು ಹೆಣ್ಣು ಕೊಟ್ಟಾರೋ ತಮ್ಮಾ... ಸೀ ನೀರಿಗೆ ತತ್ವಾರ ಆ ಹಳ್ಯಾಗ... ಸವಳು ನೀರು ಕುಡೀಲಾರದ ಓಡೇ ಹೊಕ್ಕಾಳು ನಿನ್ನ ಹೇಂತಿ... ಸೀ ನೀರು ಇರೋ ಊರಾಗ ಮನೀ ಮಾಡೋ ತಮ್ಮ...' ಅಂತ ಹೇಳಿದಾಕಿನೇ ಕೊಡಪಾನ ಸೊಂಟಕ್ಕೇರಿಸಿ ನಡದ ಬಿಟ್ಟಳು. ಚೆಲುವಿಗೆ ಯಾರೋ ಧಬಾ ಧಬಾ ತಲೀ ಮ್ಯಾಲೆ ಥಣ್ಣೀರು ಸುರುವಿದಹಾಂಗ ಆತು! 'ಅಯ್ಯೋ...! ಇವಾ ಸವಳು ನೀರಿನ ಊರಿನಾವಾ... ಇವನ್ನೇನಾರ ಲಗ್ನ ಮಾಡಿಕೊಂಡರ ಸವಳ ನೀರ ಗತಿ' ಅಂತ ಅಕಿ ಎದ್ಯಾಗ ನಾಕೈದು ಮಂದಿ ಹೆಣ್ಣು ಹುಡುಗ್ಯಾರು ಒಮ್ಮಿಗೇಲೆ ಚೀರಿದ ಹಾಂಗ ಆತು. ಚೆಲುವಿಗೆ ಆ ಚೆಲುವನ್ನ ತಿರುಗಿ ನೋಡಲಿಕ್ಕೂ ಹೆದರಿಕಿಯಾತು. ಆದರ ಎದ್ದು ಹೋಗಲಿಕ್ಕೂ ಧೈರ್ಯಾ ಸಾಲದ ಸುಮ್ಮನ ಕೂತಳು.

ಚೆಲುವ ಒಂದೊಂದ ಬೂಟುಗಾಲಿನ ಹೆಜ್ಜಿ ಇಟಗೋತ ಇಕಿ ಹತ್ತೀಲೇ ಬಂದ. ಎಂಥಾ ಖಂಬೀರ ಇದ್ದಾನ ಇವಾ!!. ಅಕಿ ಎದಿ ಬಡತ ಆವ್ಯಾ ಥವ್ಯಾ ಆತು. ಹೆಜ್ಜಿ ಹಿಂದಿಡಬೇಕೆಂದಳು ಕಾಲೇಳಲಿಲ್ಲ... ಹೆಜ್ಜಿ ಮುಂದಿಡಬೇಕೆಂದಳು ಕಾಲೇಳಲಿಲ್ಲ... ಏಕ್ದಂ ಅವನ ನೂಕಿ ಓಡಬೇಕೆಂದಳು ಆದರೆ ಅವಳ ಇಕಿ ಸನೇಕನ ಬಂದ... ಅವನ ಉಸಿರಿನ ತಾಪ ಇಕೀ ಗಲ್ಲಕ್ಕ ಬಡೀಲಿಕ್ಕೆ ಹತ್ತಿತು. ಚೆಲುವಿಯ ಗಲ್ಲಾ ಇನ್ನೂ ಕೆಂಪಾಗಿ... ಕೆಂಪಾಗಿದ್ದ ಚಿಗುರಿನ ತುಟಿಗಳು ವಣಗಲಿಕ್ಕೆ ಹತ್ತಿದವು. ಇವಾ ನನ್ನ ಏನ ಹೊತಗೊಂಡ ವಯ್ಯುತಾನೇನೊ ಎಂಬ ಸುಖದ ಕನವರಿಕಿ ವಳಗ ಆಕೀಗೆ ಒಂದ ರೀತಿ ಸುಖಾಶ್ಚರ್ಯ ಆಗಲಿಕ್ಕೆ ಹತ್ತಿದಾಗ... ಆಗs ಅಗದೀ ಆಗs ಆಗs ಇನ್ನೂ ತಾಪ ಹುಟ್ಟಿಸುವಂಥ ಧ್ವನಿ ಕೇಳಿತು... ಈ ಧ್ವನಿ ಅಕಿಗೆ ಎಲ್ಲೋ ಕೇಳಿದ್ಹಾಂಗ ಅನಿಸಿತು. 'ಏ... ಎಲ್ಲಿದ್ದಿ? ದನಾ ಕಾಯತೀಯೇನು? ನಿನ್ನ ಎಬ್ಬಿಶ್ ಎಬ್ಬಿಶ್ ಹುಚ್ಚಾಗೇವಿ, ಚಹಾಕ್ಕ ಇಡ್ ಬೇಕ' ಅಂತ ಆಕೀ ಅತ್ತಿಯ ಧ್ವನಿ ಅಪ್ಪಳಿಸಿತು. ಚೆತ್ತಾರದ ಬಳಿಗಳೆಲ್ಲಾ ಥರ ಥರ ಅಂದವು. ಛಟ್ ಅಂತ ಚೆಲುವಿ ಬಳಿಗಳನ್ನೆಲ್ಲ ಚೆಲುವನ ಚೀಲದ ಮ್ಯಾಲೆ ವಗದ ಹಾಂಗs ಇಟ್ಟಳು. ಹಿಂತಿರುಗಿ ನೋಡದನs ಧ್ವನಿ ಬಂದತ್ತ ಹೊಂಟು ಬಿಟ್ಟಳು. ಗ್ವಾಡಂಬಿ ಪ್ರಸಾದ ನೆನಪಾದವು.

ಅಕಿಗೆ ಸವಳ ನೀರು ಕುಡಿಯೋದು ಬ್ಯಾಡಾಗಿತ್ತು. ಮುಂದ ಚೆಲುವಿಯ ಹುಂಬ ಚೆಲುವ ಗಂಡ ಸೀ ನೀರಿನ ಭಾವೀನs ತಗಸೀದ... ಮತ್ತ ನಡು ಮಧ್ಯಾಹ್ನದ ಈ ಸುಂದರ ಕನಸು ಅಕಿಗೆ ಎಂದೆಂದೂ ನೆನಪಾಗಲಿಕ್ಕೆ ಬಿಡಲಿಲ್ಲ ಆದರೆ ಅಕಿ ಈ ಕನಸು ನೆನಪು ಹಾರಲಿಲ್ಲ!

ಕಳೆದ ವಾರದ 'ಚೆನ್ನುಡಿ'
'ಆದ್ರೂ ಅಮ್ಮ ಮಾಡಿದ ಹಾಂಗಲ್ಲ ಬಿಡು'
ಕೇಳಿ ಪೂರ್ಣಿಮಾ ಭಟ್ಟ ಸಣ್ಣಕೇರಿ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

